Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/72/2022-23

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ-ವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ;68
ಬೆಂಗಳೂರು - 560032.
ದಿನಾಂಕ: 21-12-2022

## ದಿನಾಂಕ; 21-12-2022 ರಂದು ವಾರ್ಡ್ ಸಮಿತಿ ಸಭೆಯ ನಡವಳಿಗಳು;-

- ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀಮತಿ. ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ನಿರ್ವಹಣೆ
- ಶ್ರೀ. ರಾಜಶೇಖರ್, ಮಾಜಿ ಬಿಬಿಎಂಪಿ ಸದಸ್ಯರು
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು ಕನಕನಗರ
- ಶ್ರೀಮತಿ ಹೇಮಲತಾ, ಭೂಮಿಕ ಮಹಿಳಾ ಸಂಘ ಸದಸ್ಯರು
- ಶ್ರೀ. ಕಲೀಲ್ ರೆಹಮಾನ್, ನಾಗರೀಕರು ಕನಕನಗರ
- ಶ್ರೀ. ಸುರೇಶ್, ನಾಗರೀಕರು ವಿ. ನಾಗೇನಹಳ್ಳಿ
- ಶ್ರೀ. ಶ್ರೀ. ಕೇಶವ ಮೂರ್ತಿ, ಬೋರ್ ವೆಲ್ ವಾಟರ್ ಮ್ಯಾನ್
- ಶ್ರೀ. ಚಿಕ್ಕಲಿಂಗಪ್ಪ, ಬೋರ್ ವೆಲ್ ವಾಟರ್ ಮ್ಯಾನ್
- ಶ್ರೀ. ಲೋಕೇಶ್, ಬೋರ್ ವೆಲ್ ವಾಟರ್ ಮ್ಯಾನ್
- ಶ್ರೀ. ನಾರಾಯಣ್ ರಾವ್, ಬೋರ್ ವೆಲ್ ವಾಟರ್ ಮ್ಯಾನ್

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮತಿ ಕಾರ್ಯದರ್ಶಿಯವರಾದ ಶ್ರೀ. ಗುರುಸಿದ್ದಪ್ಪ .ಜಿ, ವಾರ್ಡ್ ಸಮಿತಿ ಕಾರ್ಯದರ್ಶಿ, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ: 68ರ ನಾಗರೀಕರು ಹಾಗೂ ಎಲ್ಲ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಗುರುಸಿದ್ದಪ್ಪ. ಜಿ ವಾರ್ಡ್ ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳ ಬರ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ. ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು, ಹಾಗೂ ದಿನಾಂಕ; 03-12-2022 ರಂದು ನಡೆದ

ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | |
|---|---|---|
| ಪೂರ್ವ ವಲಯ (ವಾರ್ಡ್ ನಂ;68, ವಿ. ನಾಗೇನಹಳ್ಳಿ) (ಹಳೆ ವಾರ್ಡ್ ನಂ:22) | | |
| ನೋಡೆಲ್ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಪಟ್ಟಿ | | |
| ಕ್ರ. ಸಂ | ವಿಭಾಗ ಕಛೇರಿ ವಿಭಾಗ (ಹೆಬ್ಬಾಳ) | ಚರ್ಚಿಸಿದ ವಿಷಯಗಳ ಬಗ್ಗೆ |
| 01 | ಘನತ್ಯಾಜ್ಯ ನಿರ್ವಹಣೆ<br>1) ಶ್ರೀ.ರುದ್ರಮಣಿ (9916257820) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ.ಮಧು, (9742592726) ಕಿರಿಯ ಆರೋಗ್ಯ ಪರಿ ವೀಕ್ಷಕರು | • ವಾರ್ಡ್‌ನ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕ ಶೌಚಾಲಯ ಇಲ್ಲದೆ ಇರುವುದರಿಂದ ಸಾರ್ವಜನಿಕರು ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಹಾಗೂ ಇದರಿಂದ ರಸ್ತೆ ಬದಿಯಲ್ಲಿ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಹಾಗೂ ಪೌರಕಾರ್ಮಿಕರು ಕೆಲಸ ಮಾಡಲು ಕಷ್ಟಕರವಾಗುತ್ತೀರುವುದರಿಂದ ಹೊಸದಾಗಿ ಶೌಚಾಲಯವನ್ನು ನಿರ್ಮಿಸಿಕೊಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ನೋಡೆಲ್ ಅಧಿಕಾರಿಯವರಿಗೆ ಮನವಿ ಮಾಡಿದರು. |
| 02 | ಬೀದಿ ದೀಪ<br>1) ಶ್ರೀ.ಸಂದೀಪ್ (9743301942) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ. ಇಬ್ರಾಹಿಮ್ ಶಭಾಸ್ (9686536381) ಉಸ್ತುವಾರಿ ಹಾಗೂ ಗುತ್ತಿಗೆದಾರರು<br>3) ಶ್ರೀ.ಮುರಳಿ (8073479131) ಉಸ್ತುವಾರಿ<br>4) ಶ್ರೀ.ಸತೀಶ್ (9916691122) ಉಸ್ತುವಾರಿ (ಅನ್ ಅಂಡ್ ಅಫ್) | • ಶ್ರೀ. ರಾಜಶೇಖರ್ .ಎನ್, ಮಾಜಿ ಬಿಬಿಎಂಪಿ ಸದಸ್ಯರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯಲ್ಲಿ Street light ಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ತಿಳಿಸಿದರು.<br>• ಶ್ರೀ. ಲೋಕೇಶ್, ಬೋರ್ ವೆಲ್ ವಾಟರ್ ಮ್ಯಾನ್ ಮಾತನಾಡುತ್ತಾ, ಕನಕನಗರ 1ನೇ ಕ್ರಾಸ್ ರಸ್ತೆಯ Street lightಗಳು ಹಾಳಾಗಿದ್ದು, ಶೀಘ್ರವಾಗಿ lightಗಳನ್ನು ಸರಿಪಡಿಸಿಕೊಡಬೇಕೆಂದು ತಿಳಿಸಿದರು.<br>• ಶ್ರೀ. ಗೋವಿಂದ ರಾಜು, ಬೋರ್ ವೆಲ್ ವಾಟರ್ ಮ್ಯಾನ್ ಮಾತನಾಡುತ್ತಾ, ಮನೋರಾಯನ ಪಾಳ್ಯ 2ನೇ 'ಎ' ಕ್ರಾಸ್ ರಸ್ತೆಯಲ್ಲಿ Street light ಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ತಿಳಿಸಿದರು.<br>• ಶ್ರೀ. ಮಹಾದೇವ, ನಾಗರೀಕರು ಮಾತನಾಡುತ್ತಾ, ಮನೋರಾಯನ ಪಾಳ್ಯದಲ್ಲಿರುವ 5ನೇ ಕ್ರಾಸ್ ರಸ್ತೆಯಲ್ಲಿ Street lightಗಳು ಹಾಳಾಗಿರುವುದರಿಂದ ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಓಡಾಡಲು ಹಾಗೂ ಸಂಚಾರಿಸಲು ಕಷ್ಟಕರವಾಗಿರುವುದರಿಂದ ಕೂಡಲೇ Street light ಗಳನ್ನು ಸರಿಪಡಿಸಬೇಕೆಂದು ತಿಳಿಸಿದರು. |
| 03 | ಬೃಹತ್ ನೀರು ಕಾಲುವೆ<br>1) ಶ್ರೀ ಈರಣ್ಣ (9535563588) | • ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ರಾಜಕಾಲುವೆಗೆ ಸಂಬಂಧಪಟ್ಟಂತೆ ಈಗಾಗಲೇ ರಾಜಕಾಲುವೆಯ ಪಕ್ಕದ ಜಾಗದಲ್ಲಿ |

Bruhat Bengaluru
Mahanagara Palike

| | | |
|---|---|---|
| | ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ.ಶ್ರೀನಿವಾಸ (9980644355) ಸಹಾಯಕ ಅಭಿಯಂತರರು | ಆಕ್ರಮವಾಗಿ ನಿರ್ಮಿಸಿದ ಕಟ್ಟಡಗಳನ್ನು ಗುರುತಿಸಿ ನೋಟೀಸ್‌ಗಳನ್ನು ನೀಡಲಾಗಿದ್ದು, ಅದಕ್ಕೆ . ಸಂಬಂಧಪಟ್ಟ ಅಧಿಕಾರಿಗಳು ಸಮೀಕ್ಷೆಗಳನ್ನು ನಡೆಸುತ್ತಿರುವುದನ್ನು ನೋಡೆಲ್ ಅಧಿಕಾರಿಗಳು ಕಾರ್ಯದರ್ಶಿಗಳೊಂದಿಗೆ ಚರ್ಚಿಸಿದರು. |
| 04 | <u>ಆರೋಗ್ಯ ಇಲಾಖೆ</u><br>1) ಶ್ರೀಮತಿ.ವೇದಾವತಿ (8095254546)<br>2) ಶ್ರೀಮತಿ.ಉಷಾರಾಣಿ (8147022378)<br>ಹಿರಿಯ ಆರೋಗ್ಯ ಪರೀ ವೀಕ್ಷಕರು | • ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡಿನ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಯಲ್ಲಿ ಕಪ್ಪು ಚುಕ್ಕೆ (Black Spot) ಸ್ಥಳಗಳಲ್ಲಿ ಕಡ್ಡಾಯವಾಗಿ ಔಷಧ ಸಿಂಪಡಣೆ (Fogging spray)ಯನ್ನು ಮಾಡುತ್ತೀರುವ ಬಗ್ಗೆ ತಿಳಿಸಿದರು, ಅದರಂತೆ ಕಪ್ಪು ಚುಕ್ಕೆ ಸ್ಥಳಗಳಲ್ಲಿ ವಾಸನೆ ಹರಡದಂತೆ Bleaching Powder ಅನ್ನು ಸಿಂಪಡಣೆ ಮಾಡುವ ಬಗ್ಗೆ ತಿಳಿಸಿದರು.<br>• ವಾರ್ಡಿನಲ್ಲಿ ಯಾವುದೇ ಕೋವಿಡ್ +ve ಕೇಸ್‌ಗಳು ಇರುವುದಿಲ್ಲ ಆದರೂ ಸಾರ್ವಜನಿಕರ ಸ್ಥಳಗಳಲ್ಲಿ ಮಾಸ್ಕ್ ಅನ್ನು ಕಡ್ಡಾಯವಾಗಿ ಧರಿಸಬೇಕು ಹಾಗೂ ಮಳೆಯಿಂದ ರೋಗಗಳು ಹರಡುವುದು ಹೆಚ್ಚಾಗಿರುವುದರಿಂದ ಸಾರ್ವಜನಿಕರು ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ತಿಳಿಸಿದರು. |
| 05 | <u>ಕಾಮಗಾರಿ (ಬಿಬಿಎಂಪಿ)</u><br>1) ಶ್ರೀ.ವಿಶ್ವನಾಥ್ (9900095559) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ. ಗುರುಸಿದ್ದಪ್ಪ .ಜಿ ಗೋಖಲೆ (9845626122) ಸಹಾಯಕ ಅಭಿಯಂತರರು | • ಶ್ರೀ ಗುರುಸಿದ್ದಪ್ಪ, ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ವೆಟ್ ಮಿಕ್ಸ್ ಮತ್ತು ಡಾಂಬರು ಮಿಶ್ರಿತ ಜಲ್ಲಿಕಲ್ಲುಗಳಿಂದ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಈಗಾಗಲೇ ಮುಗಿಸಿರುವ ಬಗ್ಗೆ ತಿಳಿಸಿದರು.<br>• ಹಾಗೂ ಬಿಬಿಎಂಪಿ ಅನುದಾನದಡಿಯಲ್ಲಿ ಹೊಸ ಕಾಮಗಾರಿಗಳು ಪ್ರಗತಿಯಲ್ಲಿರುವ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿದರು.<br>• ಶ್ರೀ ಡೇವಿಡ್ ಫರ್ನಾಂಡಿಸ್, ನಾಗರೀಕರು ಮಾತನಾಡುತ್ತಾ, ಕನಕನಗರದ 7ನೇ ಕ್ರಾಸ್‌ನಲ್ಲಿ ರಸ್ತೆ ಗುಂಡಿಗಳು ಬಿದ್ದಿರುವುದರಿಂದ ಕೂಡಲೇ ವೆಟ್ ಮಿಕ್ಸ್ ಮತ್ತು ಡಾಂಬರು ಮಿಶ್ರಿತ ಜಲ್ಲಿಕಲ್ಲುಗಳಿಂದ ಬಿದ್ದಿರುವ ರಸ್ತೆ ಗುಂಡಿಯನ್ನು ಮುಚ್ಚುವಂತೆ ತಿಳಿಸಿದರು.<br>• ಶ್ರೀ ರಾಜಶೇಖರ್ .ಎನ್, ಮಾಜಿ ಬಿಬಿಎಂಪಿ ಸದಸ್ಯರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯಲ್ಲಿ ರೋಡ್ ಹಾಳಾಗಿರುವುದರಿಂದ ಕೂಡಲೇ ರಸ್ತೆಯನ್ನು ಸರಿಪಡಿಸುವಂತೆ ತಿಳಿಸಿದರು. |
| 06 | <u>ಕಂದಾಯ ಇಲಾಖೆ</u><br>1) ಶ್ರೀ.ರಾಜಣ್ಣ (9886329447) ಸಹಾಯಕ ಕಂದಾಯ ಅಧಿಕಾರಿ<br>2) ಶ್ರೀ.ಕೇತನ್ (9980166619) ಅಸೆಸ್ಸರ್ | • ವಾರ್ಡ್‌ವಾರು ಕಂದಾಯ ವಸೂಲಾತಿ ಮತ್ತು ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸಹಾಯಕ ಕಂದಾಯ ಅಧಿಕಾರಿಗಳಿಂದ ಪಡೆದು ಮತ್ತು ಮತದಾರ ಗುರುತೀನ ಚೀಟಿಗಳ ವಿತರಣೆಗಳ ಬಗ್ಗೆ ನೋಡೆಲ್ ಅಧಿಕಾರಿಗಳು ಚರ್ಚೆ ನಡೆಸಿದರು |

| | | |
|---|---|---|
| | 3) ಶ್ರೀ.ಕೇಶವಪ್ರಭು (9945412385) ಕಂದಾಯ ಪರೀ ವೀಕ್ಷಕರು | |
| 07 | ಉದ್ಯಾನವನ | ವಿ. ನಾಗೇನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಉದ್ಯಾನವನ ಹಾಗೂ ಸಾರ್ವಜನಿಕ ಶೌಚಾಲಯ ಇರುವುದಿಲ್ಲ ಎಂದು ಕಾರ್ಯದರ್ಶಿಯವರು ಸಭೆಯಲ್ಲಿದ್ದ ಜನರಿಗೆ ತಿಳಿಸಿದರು. |
| 08 | ಅರಣ್ಯ ಇಲಾಖೆ<br>1) ಶ್ರೀ.ರವೀಂದ್ರನಾಥ್ (6361903330) ಉಸ್ತುವಾರಿ | • ವಿ. ನಾಗೇನಹಳ್ಳಿಯ ಮುಖ್ಯರಸ್ತೆಯಲ್ಲಿರುವ ಮೈತ್ರಿ ಬಜಾರ್ ಹತ್ತಿರ ವಿದ್ಯುತ್ ಕಂಬದಮೇಲೆ ಮರದ ಕೊಂಬೆಗಳು ಹಾದುಹೋಗಿರುವುದರಿದ ಕೂಡಲೇ ಅದನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಈಗಾಗಲೇ ಮರದ ಕೊಂಬೆಗಳನ್ನು ತೆರವುಗೊಳಿಸಿರುವುದಾಗಿ ಕಾರ್ಯದರ್ಶಿಗಳು ಸಭೆಯಲ್ಲಿದ್ದ ಸದಸ್ಯರಿಗೆ ತಿಳಿಸಿದರು. |
| 09 | ಪಶು ಸಂಗೋಪನೆ<br>1) ಶ್ರೀ.ಮಲ್ಲಪ್ಪ (9480685259) ವೈದ್ಯರು<br>2) ಶ್ರೀ.ಶ್ರೀನಿವಾಸ (9448704480) ಪರೀ ವೀಕ್ಷಕರು | • ವಿ. ನಾಗೇನಹಳ್ಳಿ ವ್ಯಾಪ್ತಿಯ ಮುಖ್ಯ ಹಾಗು ಅಡ್ಡರಸ್ತೆಗಳಲ್ಲಿ ಯಾವುದೇ ಬೀದಿ ನಾಯಿಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದಲ್ಲಿ, ಕೂಡಲೇ ಪರೀ ವೀಕ್ಷಕರಿಗೆ ಮಾಹಿತಿಯನ್ನು ನೀಡಿ ಸೂಕ್ತ ಕ್ರಮಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ಕಾರ್ಯದರ್ಶಿಗಳೊಂದಿಗೆ ಚರ್ಚಿಸಿದರು. |
| 10 | ನೀರು ಮತ್ತು ಒಳಚರಂಡಿ ಇಲಾಖೆ<br>1) ಶ್ರೀಮತಿ.ಕಲ್ಪನ (9845444060) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ. ಕುಮಾರ್ .ಎಸ್ (9482798909) ಸಹಾಯಕ ಅಭಿಯಂತರರು<br>3) ಶ್ರೀ.ಲಾಸ್ಜರ್(9611983665) ಪರೀವೀಕ್ಷಕರು | • ಶ್ರೀ ಕಲೀಲ್ ರೆಹಮಾನ್, ನಾಗರೀಕರು ಮಾತನಾಡುತ್ತಾ, ಕನಕನಗರದ 7ನೇ ಅಡ್ಡರಸ್ತೆಯಲ್ಲಿ ಒಳಚರಂಡಿಯು ಹಾಳಾಗಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅದನ್ನು ಸರಿಪಡಿಸುವಂತೆ ತಿಳಿಸಿದರು. |
| 11 | ಪೋಲೀಸ್/ಟ್ರಾಫಿಕ್<br>ಪೋಲೀಸ್ ಠಾಣೆ ಹೆಬ್ಬಾಳ ವಿಭಾಗ<br>1) ಶ್ರೀ ಶಿವ (9164102272) ಪಿ.ಸಿ | • ವಾರ್ಡ್‌ನ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕರ ವಾಹನ ಕಳ್ಳತನವಾದಲ್ಲಿ ಕೂಡಲೇ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿ ನಂತರ ಕಳ್ಳತನವಾದ ಬಡಾವಣೆಯ ರಸ್ತೆಯಲ್ಲಿರುವ ಸಿ.ಸಿ.ಟಿ.ವಿ ದೃಶ್ಯವಾಳಿಯನ್ನು ಸಂಬಂಧಪಟ್ಟ ಸಂಚಾರಿ ಪೋಲೀಸ್ ಠಾಣೆಯಲ್ಲಿ ತೆಗೆದುಕೊಳ್ಳಬಹುದು ಎಂದು ನೋಡೆಲ್ ಅಧಿಕಾರಿಗಳು, ಕಾರ್ಯದರ್ಶಿ ಹಾಗೂ ಸದಸ್ಯರೊಂದಿಗೆ ಚರ್ಚಿಸಿದರು. |
| | ಪೋಲೀಸ್ ಠಾಣೆ ಕಾವಲ್ ಬೈಸಂದ್ರ<br>ಪೋಲೀಸ್ ಠಾಣೆ ಡಿ.ಜೆ ಹಳ್ಳಿ ವಿಭಾಗ<br>1) ಅಕ್ಷಯ್ (9972153491) ರೈಟರ್ | • ವಾರ್ಡ್‌ನ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕರ ಬೆಲೆ ಬಾಳುವ ವಸ್ತು ಅಥವಾ ವಾಹನ ಕಳ್ಳತನವಾದಲ್ಲಿ ಕೂಡಲೇ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿ ನಂತರ ಕಳ್ಳತನವಾದ ರಸ್ತೆಯಲ್ಲಿರುವ ಸಿ.ಸಿ.ಟಿ.ವಿ ದೃಶ್ಯವಾಳಿಯನ್ನು ಸಂಬಂಧಪಟ್ಟ ಸಂಚಾರಿ ಪೋಲೀಸ್ ಠಾಣೆಯಲ್ಲಿ ತೆಗೆದುಕೊಳ್ಳಬಹುದು ಎಂದು ನೋಡೆಲ್ ಅಧಿಕಾರಿಗಳು, |

Bruhat Bengaluru
Mahanagara Palike

| | | |
|---|---|---|
| | | ಕಾರ್ಯದರ್ಶಿ ಹಾಗೂ ಸದಸ್ಯರೊಂದಿಗೆ ಚರ್ಚಿಸಿದರು. |
| | ಟ್ರಾಫಿಕ್<br>ಸಂಚಾರಿ ಪೋಲೀಸ್ ಠಾಣೆ<br>1) ಶ್ರೀ.ಜಗದೀಶ್‌ರೆಡ್ಡಿ (8867557016) ಪಿ.ಸಿ | • ಶ್ರೀ. ಜಗದೀಶ್ ರೆಡ್ಡಿ, ಪಿ.ಸಿ ಸಂಚಾರಿ ಪೋಲೀಸ್ ರವರು ಮಾತನಾಡುತ್ತಾ, ಸುಲ್ತಾನ್ ಪಾಳ್ಯದ ಮುಖ್ಯರಸ್ತೆಯ ಹಾಗೂ ಸುಮಂಗಲಿ ಸೇವಾ ಆಶ್ರಮ ಎರಡು ಬದಿಯ ಫುಟ್‌ಪಾತ್ ಮೇಲೆ ಅನಧಿಕೃತವಾಗಿ ಅಂಗಡಿಮುಂಗಟ್ಟುಗಳು ಇರುವುದರಿಂದ ಕೂಡಲೇ ಅದನ್ನು ತೆರವುಗೊಳಿಸಿ ಸ್ವಚ್ಛಗೊಳಿಸಬೇಕೆಂದು ತಿಳಿಸಿದರು. ಹಾಗೂ ಫುಟ್‌ಪಾತ್‌ಅನ್ನು ಸ್ವಚ್ಛಗೊಳಿಸಬೇಕೆಂದು ತಿಳಿಸಿದರು. |
| 12 | ಬೆಸ್ಕಾಂ<br>ಹೆಬ್ಬಾಳ ವಿಭಾಗ ಸಿ–4<br>1) ಶ್ರೀ ರಾಜು (9449844644) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀಮೊಹಮ್ಮದ್ (9449864897) ಸಹಾಯಕ ಅಭಿಯಂತರರು | • ವಿ. ನಾಗೇನಹಳ್ಳಿ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳ ಬದಿಗಳಲ್ಲಿ ಅಲ್ಲಲ್ಲಿ ಕೇಬಲ್ ವೈರ್‌ಗಳು ನೇತಾಡುತ್ತೀರುವುದರಿಂದ ಹಿರಿಯ ನಾಗರೀಕರು ಹಾಗೂ ಮಕ್ಕಳು ರಸ್ತೆಯ ಬದಿಯಲ್ಲಿ ಓಡಾಡಲು ಕಷ್ಟಕರವಾಗಿರುವುದರಿಂದ ಕೂಡಲೇ ಕೇಬಲ್ ವೈರ್‌ಗಳನ್ನು ತೆರವುಗೊಳಿಸಿವಂತೆ ತಿಳಿಸಿದರು.<br>• ಹಾಗೂ ಏರ್‌ಟೆಲ್ ಅಥವಾ ಜಿಯೋ ಇಲಾಖೆಗೆ ಸಂಬಂಧಪಟ್ಟ ಕೇಬಲ್ ವೈರ್‌ಗಳು ರಸ್ತೆಯ ಬದಿಯಲ್ಲಿ ಅಲ್ಲಲ್ಲಿ ಬಿದ್ದಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾದರೆ ಇದಕ್ಕೆ ನೇರ ಹೊಣೆ ಸಂಬಂಧಪಟ್ಟ ಇಲಾಖೆಯಾಗಿರುತ್ತದೆ ಮತ್ತು ರಸ್ತೆಯ ಬದಿಯಲ್ಲಿ ಬಿದ್ದಿರುವ ಏರ್‌ಟೆಲ್ ಅಥವಾ ಜಿಯೋ ಕೇಬಲ್‌ಗಳನ್ನು ಕೂಡಲೇ ಸಂಬಂಧಪಟ್ಟ ಇಲಾಖೆಯವರಿಂದ ತೆರೆವುಗೊಳಿಸುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. |
| | ಕಾವಲ್ ಬೈಸಂದ್ರ ವಿಭಾಗ ಸಿ–5<br>1) ಶ್ರೀ.ಪ್ರಭಾಕರ್ (9449844645) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ.ರಾಮು (9449864899) ಸಹಾಯಕ ಅಭಿಯಂತರರು<br>3) ಶ್ರೀ. ಗಂಗಾಧರ್ .ಕೆ, ಕಿರಿಯ ಅಭಿಯಂತರರು | • ಶ್ರೀ ಗಂಗಾಧರ್ .ಕೆ, ಕಿರಿಯ ಅಭಿಯಂತರರು, ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ Street light ಗಳಿಗೆ ಮೀಟರ್ ಇಲ್ಲದೆ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಬೆಸ್ಕಾಂ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಹೊಸದಾಗಿ ಮೀಟರ್‌ಗಳನ್ನು ಅಳವಡಿಸುವಂತೆ ತಿಳಿಸಿದರು. ಅದರಂತೆ Switch buttons(on/off) ಕೂಡ ಅಳವಡಿಸುವಂತೆ ತಿಳಿಸಿದರು. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಪುನರಾವಲೋಕನೆ ಮಾಡಲಾಯಿತ್ತು.<br>• ಹಾಗೂ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಕೆಲವು ಬೋರ್ ವೆಲ್‌ಗಳ ವಿದ್ಯುತ್ ಕಂಬಕ್ಕೆ ನೇರ ಸಂಪರ್ಕವನ್ನು ಹೊಂದಿರುವುದರಿಂದ ಮೀಟರ್ ಇಲ್ಲದೆ ಇರುವ ಕಾರಣ ಬೆಸ್ಕಾಂ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಮೀಟರ್‌ಗಳನ್ನು ಪಡೆದು ಬೋರ್‌ವೆಲ್‌ಗಳಿಗೆ ಮೀಟರ್‌ಗಳನ್ನು ಅಳವಡಿಸುವಂತೆ ತಿಳಿಸಿದರು. ತಪ್ಪಿದ್ದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಾಗಿ . ತಿಳಿಸಿದರು. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಚರ್ಚೆ ಮಾಡಲಾಯಿತ್ತು.<br>• ವಾರ್ಡಿನ ವ್ಯಾಪ್ತಿಯಲ್ಲಿರುವ ಸಿ.ಸಿ.ಟಿ.ವಿ ಕ್ಯಾಮರಾಗಳ ವಿದ್ಯುತ್ ಬಿಲ್‌ಅನ್ನು ಪಾವತಿಸದೆ ಇರುವುದರಿಂದ ಸಿ.ಸಿ.ಟಿ.ವಿ ಕ್ಯಾಮರಾಗಳ ಸಂಪರ್ಕವನ್ನು ಕಡಿತಗೊಳಿಸುವುದಾಗಿ ತಿಳಿಸಿದರು ಹಾಗೂ ಕೆಲವು ಸಿ.ಸಿ.ಟಿ.ವಿ ಕ್ಯಾಮರಾಗಳಿಗೆ ಮೀಟರ್ ಇಲ್ಲದೆ ಇರುವುದರಿಂದ ಕೂಡಲೇ |

Bruhat Bengaluru
Mahanagara Palike

| | | |
|---|---|---|
| | | ಮೀಟರ್‌ಗಳನ್ನು ಅಳವಡಿಸುವಂತೆ ತಿಳಿಸಿದರು. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಪುನರಾವಲೋಕನೆ ಮಾಡಲಾಯಿತ್ತು. |

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡಕ್ರಮದ ಬಗ್ಗೆ ವರದಿ, ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಶ್ರೀ. ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 1:15ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಹಾಗೂ ಕಳೆದ ವಾರ್ಡ್ ಸಭೆಗೆ ಕೆಲವು ಇಲಾಖೆಯವರು ಹಾಜರಾಗದೇ ಇರುವುದರಿಂದ ಎಲ್ಲಾ ಇಲಾಖೆ ವತಿಯಿಂದ ಒಬ್ಬ ಅಧಿಕಾರಿಯವರನ್ನು ನೇಮಕ ಮಾಡಿ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಅಧಿಕಾರಿಗಳು ತಿಳಿಸಿದರು.

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಹಾಗೂ
ಸಹಾಯಕ ಅಭಿಯಂತರರು ವಾರ್ಡ್ ನಂ:22

(ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್)
ನೋಡೆಲ್ ಅಧಿಕಾರಿರವರು
ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು